ಮುಂದಿನ ದಿನಗಳಲ್ಲಿ ಕನ್ನಡಕುಲದ ಅಳಿವಿಗೆ ಇಂದಿನ ಹೆರುವೇಣಿಕೆ ಪ್ರಮಾಣಗಳು ಹೇಗೆ ಕಾರಣವಾಗಬಹುದು ಎಂಬುದರ ಬಗ್ಗೆಯೆಲ್ಲಾ ಅಧ್ಯಯನಗಳು ನಡೆದಿವೆ.

ಕರ್ನಾಟಕ ಸರ್ಕಾರವು ಹೆರುವಣಿಕೆ ಮಟ್ಟವನ್ನು ಮತ್ತಷ್ಟು ಕುಗ್ಗಿಸಿಕೊಳ್ಳುವ ಬದಲಿಗೆ ಆರೋಗ್ಯಕರವಾದ ಜನಸಂಖ್ಯೆಯ ಸ್ಫೋಟವಾಗಲೀ, ಕುಸಿತವಾಗಲೀ ಆಗದಂತಹ 2.1ರ ಮಟ್ಟದತ್ತ ಒಯ್ಯಲು ಕ್ರಮ ತೆಗೆದುಕೊಳ್ಳಬೇಕೆಂಬುದು ಕನ್ನಡ ಹೋರಾಟದ ಭಾಗವಾಗಿದೆ. ಅತಿಯಾದ ಅನಿಯಂತ್ರಿತ ವಲಸೆಗಳು ಬದಲಾಯಿಸುತ್ತಿರುವ ನಾಡಿನ ಜನಲಕ್ಷಣದ (Demography) ಅಪಾಯದ ಅರಿವು ಕನ್ನಡಿಗರಲ್ಲಿ ಮೂಡುತ್ತಿದೆ. ನಾಡಿಗೆ ವಲಸೆ ಬರುವ ಮಂದಿ ಮುಖ್ಯವಾಹಿನಿಯಲ್ಲಿ ಬೆರೆಯಲು ಅನುಕೂಲವಾಗುವಂತಹ ಕನ್ನಡ ಕಲಿಸುವ ಕಾಯಕಕ್ಕೆ ಇಂದಿನ ಚಳವಳಿಗಾರರು ಒತ್ತು ನೀಡುತ್ತಿದ್ದಾರೆ.

ಮುಂದಿನ ದಿನಗಳಲ್ಲಿ ನಡೆಯಬಹುದಾದ ಲೋಕಸಭಾ ಸ್ಥಾನಗಳ ಪುನರ್‌ಹಂಚಿಕೆಯಲ್ಲಿ ಕರ್ನಾಟಕದಂತಹ ರಾಜ್ಯಗಳಿಗೆ ಆಗಲಿರುವ ಅನ್ಯಾಯದ ಬಗ್ಗೆ, ಪ್ರಾತಿನಿಧ್ಯ ಕುಸಿಯುವ ಬಗ್ಗೆ ಇಂದಿನ ಕನ್ನಡಿಗರು ದನಿ ಎತ್ತುತ್ತಿದ್ದಾರೆ.

### ಕನ್ನಡಿಗರ ಏಳಿಗೆಗೆ ‘ನುಡಿ ಹಮ್ಮುಗೆ’

ಹೊಸ ಕಾಲಕ್ಕೆ ತಕ್ಕಂತೆ ಕನ್ನಡವನ್ನು ಕಟ್ಟುವ ಹಂಬಲದಿಂದ, ಹಿಂದೆಂದೂ ಅಳವಡಿಸಿಕೊಂಡಿರದ ‘ನುಡಿ ಹಮ್ಮುಗೆ’ ಎನ್ನುವ ಹೊಸ ಸಾಧನವನ್ನು ಅಳವಡಿಸಿಕೊಳ್ಳುವ ಯತ್ನಗಳಾಗುತ್ತಿವೆ. ‘ನುಡಿ ಹಮ್ಮುಗೆ’ ಎಂದರೆ ‘ಲಾಂಗ್ವೇಜ್ ಪ್ಲಾನಿಂಗ್’ (Language Planning). ಜಗತ್ತಿನ ಹಲವಾರು ದೇಶಗಳು ನುಡಿ ಹಮ್ಮುಗೆಯನ್ನು ಅಳವಡಿಸಿಕೊಂಡು ಯಶಸ್ವಿಯಾಗಿವೆ.

ಫ್ರೆಂಚ್, ಹೀಬ್ರೂ, ಇಂಗ್ಲಿಷ್, ಜಪಾನೀಸ್, ಟರ್ಕಿಶ್, ಕೊರಿಯನ್ ಮೊದಲಾದ ಅನೇಕ ನುಡಿ ಸಮುದಾಯಗಳು ತಮ್ಮ ಏಳಿಗೆಗೆ ಪೂರಕವಾಗುವಂತೆ ನುಡಿ ಹಮ್ಮುಗೆಯನ್ನು ಕಾಲಾಂತರದಿಂದ ಮಾಡಿಕೊಂಡೇ ಬಂದಿವೆ. ಚಿಕ್ಕದಾಗಿ ಹೇಳಬೇಕೆಂದರೆ ನಮ್ಮ ನುಡಿ ಎಲ್ಲೆಲ್ಲಾ ಇರಬೇಕು, ಹೇಗೆಲ್ಲಾ ಇರಬೇಕು ಎನ್ನುವುದನ್ನು ಯೋಜಿಸಿ ಜಾರಿಗೊಳಿಸುವುದು ನುಡಿ ಹಮ್ಮುಗೆಯಾಗಿದೆ. ಹೀಗೆ ಮಾಡಲು ಅನುಸರಿಸಬೇಕಾದ ಮೊದಲ ಕ್ರಮವೆಂದರೆ, ನುಡಿ ಕಡತವೊಂದನ್ನು ಸಿದ್ಧ ಮಾಡಿಕೊಳ್ಳುವುದು. ಹುಟ್ಟಿನಿಂದ ಸಾವಿನವರೆಗಿನ ಎಲ್ಲಾ ವಿಷಯ, ವಸ್ತು, ಘಟನೆ, ಅಗತ್ಯಗಳ ಪಟ್ಟಿಯೇ ನುಡಿ ಕಡತ. ಆ ನಂತರ ಎಲ್ಲಿಲ್ಲಿ ನುಡಿಯ ಅಸ್ತಿತ್ವ/ಬಳಕೆ ಇದೆ ಮತ್ತದು ಯಾವ ಪ್ರಮಾಣದಲ್ಲಿದೆ ಎಂಬುದನ್ನು ಸಮೀಕ್ಷೆ ಮಾಡಿ ವಸ್ತುಸ್ಥಿತಿಯನ್ನು ಅರಿಯುವುದು. ಉದಾಹರಣೆಗೆ, ಕನ್ನಡದಲ್ಲಿ ಲಾಲಿ ಹಾಡುಗಳು ಇವೆಯೇ ಎಂದೂ, ಇದ್ದರೆ ಬಳಕೆಯಲ್ಲಿ ಇವೆಯೇ ಎನ್ನುವುದು ನುಡಿ ಕಡತದ ಒಂದು ಪುಟದ ಸಮೀಕ್ಷೆಯಾಗುತ್ತದೆ. ನಂತರ ಗುರಿಯನ್ನು ಗೊತ್ತುಮಾಡಿಕೊಂಡು ಅದನ್ನು ತಲುಪಲು ಬೇಕಾದ ಸಂಪನ್ಮೂಲಗಳನ್ನು ಒಟ್ಟುಮಾಡಿಕೊಂಡು ಗುರಿಯನ್ನು ಸಾಧಿಸುವತ್ತ ಹೆಜ್ಜೆ ಹಾಕುವುದು.



ನುಡಿ ಹಮ್ಮುಗೆಯ ಬಗ್ಗೆ ಈಗಾಗಲೇ ಆರಂಭಿಕ ಕೆಲಸಗಳು ನಡೆಯುತ್ತಿದ್ದು, ಕನ್ನಡ ಸಮಾಜ ಮತ್ತು ಸರ್ಕಾರಗಳು ಈ ಬಗ್ಗೆ ಗಮನ ಹರಿಸಬೇಕಿದೆ. ತರ್ಕಬದ್ಧವೂ ವೈಜ್ಞಾನಿಕವೂ ಕಾರ್ಯಸಾಧುವೂ ಆಗಿರುವ ಇಂತಹ ಕಾರ್ಯವಿಧಾನವನ್ನು ಇಂದಿನ ಕನ್ನಡ ಚಳವಳಿಯು ಕೈಗೆತ್ತಿಕೊಳ್ಳುತ್ತಿದೆ ಎನ್ನುವುದು ಇಡೀ ಕನ್ನಡ ಚಳವಳಿ ಸಾಗುತ್ತಿರುವ ದಿಕ್ಕನ್ನು ತೋರಿಸುತ್ತಿದ್ದು, ಭರವಸೆಯ ಬೆಳಕಾಗಿದೆ.

‘ಕಾಣಲಿ ಕನ್ನಡ, ಕೇಳಲಿ ಕನ್ನಡ’ ಎನ್ನುವುದು ಇಂದಿನ ಕನ್ನಡ ಚಳವಳಿಯ ಧ್ಯೇಯವಾಕ್ಯವಾಗುತ್ತಿದೆ. ಹುಸಿ ರಾಷ್ಟ್ರೀಯತೆಗೂ ರಾಷ್ಟ್ರೀಯತೆಗೂ ನಡುವಿನ ವ್ಯತ್ಯಾಸಗಳು ಈಗ ಸ್ಪಷ್ಟವಾಗಿ ಕಾಣುತ್ತಿವೆ. ಕನ್ನಡಿಗರಲ್ಲಿ ತಮ್ಮತನದೊಂದಿಗೇ ಭಾರತದ ಏಳಿಗೆ ಮಾಡಬೇಕು ಎನ್ನುವುದರ ಅರಿವು ಮೂಡಿಸುವ ಕೆಲಸವನ್ನು ಕನ್ನಡದ ಹೊಸ ತಲೆಮಾರಿನ ಹೋರಾಟಗಾರರು ಮನವರಿಕೆ ಮಾಡುತ್ತಿದ್ದಾರೆ. ಭವ್ಯವಾದ ನಾಳೆಗಳನ್ನು ಕಟ್ಟಲು ಆಗಬೇಕಾದ ಕೆಲಸಗಳ ಅರಿವು, ಚರ್ಚೆಗಳು, ಯೋಜನೆಗಳು ನಡೆಯುತ್ತಿರುವಾಗಲೇ ಕನ್ನಡಿಗರಲ್ಲಿ ಆತ್ಮಸ್ಥೈರ್ಯ ತುಂಬುವ, ತಾವು ಸಾಧಿಸಲಾಗದ್ದು ಏನೂ ಇಲ್ಲ ಎಂಬ ಆತ್ಮವಿಶ್ವಾಸ ತುಂಬುವ ನಿಟ್ಟಿನಲ್ಲಿ ಕನ್ನಡದ ಇತಿಹಾಸ ತೆರೆದಿಡುವ, ಹಿಂದಿನವರ ಸಾಧನೆಗಳನ್ನು ಪ್ರತಿಯೊಬ್ಬರಿಗೂ ತಲುಪಿಸುವ ಮೂಲಕ ಹೊಸ ಚೈತನ್ಯ ತುಂಬುವ ಕೆಲಸಗಳನ್ನೂ ಯುವ ಕನ್ನಡ ಚಳವಳಿಕಾರರು ಕೈಗೆತ್ತಿಕೊಂಡಿದ್ದಾರೆ.

ಕನ್ನಡ ಚಳವಳಿಯು ಗೆಲ್ಲಬೇಕಾದರೆ ಅದರಲ್ಲಿ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಹಂಪಿ ವಿಶ್ವವಿದ್ಯಾಲಯಗಳೂ ಸೇರಿದಂತೆ ಅನೇಕ ಸಂಸ್ಥೆಗಳ ನೆರವು ಹಾಗೂ ತೊಡಗುವಿಕೆ ಅಗತ್ಯ. ಈ ಪೀಳಿಗೆಯ ಹೋರಾಟಗಾರರು ಈ ಸಂಸ್ಥೆಗಳ ಜೊತೆಯಲ್ಲೂ ಒಡನಾಟ ಇಟ್ಟುಕೊಂಡು ಸರ್ಕಾರದ ಕನ್ನಡಕ್ಕೆ ಸಂಬಂಧಿಸಿದ ನೀತಿ ನಿಯಮಗಳ ರೂಪಿಸುವಿಕೆಗಳ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಿದ್ದಾರೆ.

ಕನ್ನಡ ಚಳವಳಿ ಪಡೆದುಕೊಂಡಿರುವ ಹೊಸ ದಿಕ್ಕನ್ನು ಗಮನಿಸಿದಾಗ ‘ಕನ್ನಡ ತಾಯಿ ಬಂಜೆಯಲ್ಲ, ಕನ್ನಡದ ನಾಳೆಗಳು ಬರಡಲ್ಲ’ ಎಂಬ ಭರವಸೆಯ ಭಾವನೆ ಮೂಡುತ್ತದೆ. ಕನ್ನಡ ಚಳವಳಿಯನ್ನು ಗಂಭೀರವಾಗಿ ಪರಿಗಣಿಸಿ, ಕನ್ನಡ ಕೇಂದ್ರಿತ ಸಿದ್ಧಾಂತವನ್ನು ಅರ್ಥ ಮಾಡಿಕೊಂಡು, ಭಾರತದ ಏಳಿಗೆಯು ಅಡಗಿರುವುದೇ ಏಳಿಗೆಯಾದ ಕರ್ನಾಟಕ, ಏಳಿಗೆಯಾದ ತಮಿಳುನಾಡು, ಏಳಿಗೆಯಾದ ಮಹಾರಾಷ್ಟ್ರ, ಏಳಿಗೆಯಾದ ಉತ್ತರಪ್ರದೇಶ... ಏಳಿಗೆಯಾದ ರಾಜ್ಯಗಳಲ್ಲಿ ಎಂಬುದನ್ನು ಅರ್ಥ ಮಾಡಿಕೊಂಡು ಕನ್ನಡ ಚಳವಳಿಯಲ್ಲಿ ಪ್ರತಿಯೊಬ್ಬರೂ ತೊಡಗಬೇಕಾದ ಸಂದರ್ಭ ನಮ್ಮೆದುರು ಇಂದು ನಿಂತಿದೆ.

ಕೊನೆಯದಾಗಿ, ನಮ್ಮಲ್ಲಿ ಮೂಡಿರಬಹುದಾದ – ‘ಕನ್ನಡ ಚಳವಳಿಯಲ್ಲಿ ತೊಡಗುವುದು ಹೇಗೆ?’ ಎಂಬ ಪ್ರಶ್ನೆಗೆ ಉತ್ತರ ಸರಳವಾಗಿದೆ. ಕನ್ನಡದಲ್ಲಿ ಗ್ರಾಹಕಸೇವೆಯನ್ನು ಒತ್ತಾಯಿಸುವ ಮೂಲಕ, ವಲಸಿಗರೊಂದಿಗೆ ಕನ್ನಡದಲ್ಲೇ ಮಾತಾಡುವ ಮೂಲಕ, ಕನ್ನಡದ ಶಾಲೆಗಳ ಉಳಿವಿಗೆ ನೆರವಾಗುವ ಮೂಲಕ, ಕನ್ನಡದ ಉದ್ದಿಮೆಗಳನ್ನು ಪೋಷಿಸುವ ಮೂಲಕ, ಕನ್ನಡಿಗರಿಗೆ ಉದ್ಯೋಗಾವಕಾಶ ಒದಗಿಸುವ ಮೂಲಕ ಕನ್ನಡ ಚಳವಳಿಯ ಭಾಗವಾಗಬೇಕಾಗಿದೆ. ಪ್ರತಿಯೊಬ್ಬರೂ ನಾಡು ಕಟ್ಟುವ ಕೆಲಸದಲ್ಲಿ ಕೈ ಜೋಡಿಸಬಹುದು. ಬಹುಶಃ ಇದು ಕನ್ನಡಿಗರಾಗಿ ನಾವೂ ನೀವೂ ಈ ನಾಡಿಗೆ ಮಾಡಬಹುದಾದ, ಮಾಡಲೇ ಬೇಕಾದ ಕನಿಷ್ಠ ಸೇವೆ!

ಪ್ರತಿಕ್ರಿಯಿಸಿ: feedback@sudha.co.in